◆ **ನೃತ್ಯ ಮತ್ತು ನಿಮ್ಮ ಭೇಟಿ ಹೇಗಾಯಿತು?**

ಬಾಲ್ಯದಲ್ಲಿ ನನಗೆ ಸ್ವಲ್ಪ ಅಸ್ತಮಾ ಸಮಸ್ಯೆ ಕಾಡುತ್ತಿತ್ತು. ನೃತ್ಯ ಕಲಿತರೆ, ನಿರಂತರ ಚಟುವಟಿಕೆಯಲ್ಲಿ ಇದ್ದರೆ, ಅಸ್ತಮಾ ಕಡಿಮೆಯಾಗುತ್ತದೆ ಎಂದು ಅಪ್ಪ ಅಮ್ಮನಿಗೆ ಯಾರೋ ಸಲಹೆ ಮಾಡಿದ್ದರು. ಹಾಗಾಗಿ ನನ್ನನ್ನು ಭರತನಾಟ್ಯ ತರಗತಿಗೆ ಸೇರಿಸಿದರು. ನೃತ್ಯ ಕಲಿಕೆಯನ್ನು ಆರಂಭಿಸಲು ಇದು ಒಂದು ನೆಪವಷ್ಟೇ. ಹತ್ತನೇ ತರಗತಿಯ ನಂತರ ನಾನು, ನೃತ್ಯ ಕಲಿಕೆಯನ್ನೇ ಮುಂದುವರೆಸುತ್ತೇನೆ ಎಂದು ಮನೆಯಲ್ಲಿ ಹೇಳಿದೆ. ಮನೆಯಲ್ಲಿ ವಿರೋಧವೇನೂ ಇರಲಿಲ್ಲ. ನಮ್ಮದು ಕೃಷಿ ಆಧಾರಿತ ಕುಟುಂಬ. ನಮ್ಮ ಊರಿನಲ್ಲೊಂದು ದೇವಸ್ಥಾನವಿತ್ತು. ಅದಕ್ಕೆ ನಮ್ಮ ಮನೆಯವರು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ತಿರುವಾತಿರಕ್ಕಳಿ ನೃತ್ಯದಲ್ಲಿ ನನ್ನ ಅಮ್ಮ, ಅತ್ತೆಯರು, ಚಿಕ್ಕಮ್ಮಂದಿರು ಎಲ್ಲರೂ ಭಾಗವಹಿಸುತ್ತಿದ್ದವು. ಕೇಂದ್ರದಲ್ಲಿ ದೀಪವಿರಿಸಿ ಸುತ್ತಲೂ ನರ್ತಿಸುವ ಈ ನಿಧಾನ ನೃತ್ಯವು ನನ್ನ ಪ್ರೀತಿಯ ನೃತ್ಯವಾಗಿತ್ತು. ಧನುರ್ಮಾಸದಲ್ಲಿ ಆ ದೇವಸ್ಥಾನದಲ್ಲಿ ಸದಾ ಕೇಳಿಬರುತ್ತಿದ್ದ 'ಗಂಧರ್ವನ್ ಪಾಟ್' ಇಂದಿಗೂ ನನ್ನ ಕಿವಿಯಲ್ಲಿ ಗುಂಯ್‌ಗುಡುತ್ತಿದೆ. ಹೀಗೆ ಭರತನಾಟ್ಯ ಕಲಿತು, ಬಳಿಕ ಮೋಹಿನಿಯಾಟ್ಟಂ, ಕೂಡಿಯಾಟ್ಟಂ ನೃತ್ಯಗಳನ್ನು ಕಲಿಯುತ್ತ ನಾನು ಮೋಹಿನಿಯಾಟ್ಟಂ ನನ್ನ ಇಷ್ಟದ ಕ್ಷೇತ್ರವೆಂದು ನಿರ್ಧರಿಸಿರಬೇಕು.

ನೃತ್ಯಕ್ಷೇತ್ರಕ್ಕೆ ಪ್ರವೇಶಿಸಿದ್ದು 60ರ ದಶಕದಲ್ಲಿ. ಆಗ ಮೋಹಿನಿಯಾಟ್ಟಂ ನೃತ್ಯವು ಅಷ್ಟೇನೂ ಜನಪ್ರಿಯವಾಗಿರದೇ ಅನೇಕ ಟೀಕೆ ಟಿಪ್ಪಣಿಗಳನ್ನು ಎದುರಿಸುತ್ತಿತ್ತು. ನಂತರದಲ್ಲಿ ಮಹಾರಾಜ ಸ್ವಾತಿ ತಿರುನಾಳ್ ಅವರ ಭಕ್ತಿ ಮತ್ತು ಶೃಂಗಾರದ ಕೃತಿಗಳನ್ನು ಸ್ವೀಕರಿಸಿದ ಮೋಹಿನಿಯಾಟ್ಟಂ ಹೊಸ ರೂಪು ಪಡೆಯಿತು ಎನ್ನಬಹುದು. ಆದರೆ ನಿಧಾನವಾಗಿ ಮೋಹಿನಿಯಾಟ್ಟಂ ನೃತ್ಯಪ್ರಸ್ತುತಿಯು ಭರತನಾಟ್ಯ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯ ಚೌಕಟ್ಟನ್ನು ಅನುಸರಿಸಲು ಆರಂಭಿಸಿತು. ಭರತನಾಟ್ಯ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತದ ಭಾರೀ ಪ್ರಭಾವದಿಂದ ಈ ನೃತ್ಯವು ನಲುಗಿಹೋಗಿತ್ತು.

20ನೇ ಶತಮಾನದ ವೇಳೆಗೆ ಕಲಾಮಂಡಲಂನಲ್ಲಿ ನೃತ್ಯ ಪ್ರಕಾರದ ಪರಿಷ್ಕರಣೆ ನಡೆದಾಗ, ಅದು ಮೂಲ ಜನಪದೀಯ ಶೈಲಿಗೆ ಬದ್ಧವಾಗಿ ಉಳಿಯದೇ, ಸ್ವಾತಿ ತಿರುನಾಳ್ ಅವರ ಗಾಢಪ್ರಭಾವದೊಂದಿಗೆ ಉಳಿದುಕೊಂಡಿತು. ಅಂದರೆ ವರ್ಣಂ, ಪದಮ್ ಮತ್ತು ತಿಲ್ಲಾನ ಹಾಗೂ 'ಚೋಲ್ಕೆಟ್ಟು'ಗಳೊಂದಿಗೆ ಅದು ಪ್ರಸ್ತುತಗೊಳ್ಳತೊಡಗಿತು. ಮೋಹಿನಿಯಾಟ್ಟಂನ ಮೂಲ ರಸವಾದ ಕುರತ್ತಿ, ಮುಕ್ಕುತ್ತಿ, ಪೊಲಿ ಮುಂತಾದ ಅಂಶಗಳು ಈ ಪರಿಷ್ಕರಣೆ ಸಂದರ್ಭದಲ್ಲಿ ಮಾಯವಾಗಿದ್ದವು. ಹೊಸರೂಪು ಪಡೆಯುವ ಭರಾಟೆಯಲ್ಲಿ ಅದು ತನ್ನ ನೆಲದ ಜಾನಪದ ಪ್ರಭಾವವನ್ನು, ನೆಲಮೂಲದ ಸಂಸ್ಕೃತಿಯನ್ನು ಮರೆತಂತೆ ಕಂಡಿತು. ದೇಸೀ ನೃತ್ಯ ಪ್ರಕಾರಗಳಾದ ನಂಗಿಯಾರ್ ಕೂತ್, ತಿರುವಾತಿರಕ್ಕಳಿ ಮುಂತಾದ ಕೇರಳೀಯ ನೃತ್ಯಗಳ ಅಂಶಗಳು ಇದರಲ್ಲಿ ಯಾಕೆ ಗೋಚರಿಸುತ್ತಿಲ್ಲ ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ಮೂಡಿತು. ಈ ಪ್ರಶ್ನೆಯೇ ನನ್ನನ್ನು ಅಧ್ಯಯನದೆಡೆಗೆ ಸಾಗುವಂತೆ ಪ್ರೇರೇಪಿಸಿತು.

◆ **ಕಲಾಮಂಡಲಂನಲ್ಲಿ ದೇಸೀ ಅಂಶಗಳನ್ನು ಕೈಬಿಡಲು ಕಾರಣಗಳೇನಿರಬಹುದು?**

19ನೇ ಶತಮಾನದ ಅಂತ್ಯದ ಸಾಮಾಜಿಕ-ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಮೋಹಿನಿಯಾಟ್ಟಂ ಕಲೆ ಮತ್ತು ಕಲಾವಿದರ ಸ್ಥಿತಿ ಅಷ್ಟೇನೂ ಚೆನ್ನಾಗಿರಲಿಲ್ಲ. ರಾಜಮನೆತನಗಳು ಬ್ರಿಟಿಷರ ತೆಕ್ಕೆಗೆ ಹೋದಾಗ, ಕಲಾಪ್ರಕಾರಗಳಿಗೆ ದೊರೆಯುವ ಆಶ್ರಯಗಳು ಕಡಿಮೆಯಾದವು. ಮೋಹಿನಿಯಾಟ್ಟಂ ಕಲಾಪ್ರಕಾರದ ವರ್ಚಸ್ಸೂ ವಿವಿಧ ಕಾರಣಗಳಿಂದಾಗಿ ಮಸುಕಾಲಾರಂಭಿಸಿತು. ಒಂದು ಉದಾಹರಣೆ ಹೇಳುವುದಾದರೆ, 'ಚಂದನಂ' ನೃತ್ಯ ಪ್ರಸ್ತುತಿಯ ನಂತರ ಕಲಾವಿದೆಯು ವೇದಿಕೆಯಿಂದ ಇಳಿದು, ಸಭಿಕರಿಗೆ ಗಂಧ ಹಚ್ಚುತ್ತಾ ಸಾಗುವುದು ವಾಡಿಕೆಯಾಯಿತು. ಪ್ರತಿಯಾಗಿ ಸಭಿಕರು ತಟ್ಟೆಗೆ ಹಣ ಹಾಕಬೇಕಿತ್ತು. 'ಮುಕ್ಕುತ್ತಿ' ಪ್ರಸ್ತುತಿಯಲ್ಲಿ ಕಲಾವಿದೆಯು ಕಳೆದುಹೋದ ತನ್ನ ಮೂಗುತಿಯನ್ನು ಹುಡುಕುತ್ತ, ಸಭೆಯಲ್ಲಿದ್ದ ಗಣ್ಯರ ಮುಂಡಾಸು, ಜೇಬುಗಳಲ್ಲಿ ಅವುಗಳನ್ನು ಹುಡುಕುವ ಪದ್ಧತಿಯೊಂದು ಸೇರಿಕೊಂಡಿತ್ತು. ಬ್ರಿಟಿಷ್ ಆಡಳಿತದಲ್ಲಿ ಈ ನೃತ್ಯಗಳಿಗೆ ನಿಷೇಧವಿದ್ದುದರಿಂದ, ಕಲಾಮಂಡಲಂ